## <u>ಕರ್ನಾಟಕ ಸರ್ಕಾರದ ನಡವಳಿಗಳು</u>

**ವಿಷಯ:** **NRDWP**ಯಡಿ ಕೇಂದ್ರ ವಲಯದಡಿ **2013-14**ರ ಸಾಲಿಗೆ ಅನುದಾನ ಬಿಡುಗಡೆ ಕುರಿತು.

**ಓದಲಾಗಿದೆ:**

1. ಗ್ರಾಅಪಂ.ರಾಜ್ ಇಲಾಖೆಯ ಆಂತರಿಕ ಆರ್ಥಿಕ ಸಲಹೆಗಾರರ ಆದೇಶ ಸಂಖ್ಯೆ: ಗ್ರಾಅಪ/58/ ಎಎಫ್ಎನ್/2012, ದಿ:01.04.2013.
2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/52/ಗ್ರಾನೀಸ(2)2013, ದಿ:15.05.2013, ದಿ:10.07.2013, ದಿ:10.09.2013, ದಿ:07.10.2013 ಮತ್ತು ದಿ:09.12.2013.
3. GoI ಅನುದಾನ ಬಿಡುಗಡೆ ಆದೇಶ ಸಂಖ್ಯೆ: W-11020/12 /2013 /NRDWP/Water/57/58/ 59/60/61/62, ದಿ:28.06.2013.
4. GoI ಅನುದಾನ ಬಿಡುಗಡೆ ಆದೇಶ ಸಂಖ್ಯೆ: W-11020/12/2013/NRDWP/Water/117/118/ 119/220/221/222, ದಿ:13.09.2013.
5. GoI ಅನುದಾನ ಬಿಡುಗಡೆ ಆದೇಶ ಸಂಖ್ಯೆ: W-11020/12/2013/ NRDWP/Water/140/ 141/ 142/186/187/188/209/210/211, ದಿ:26.09.2013 ಮತ್ತು ದಿ:30.09.2013.
6. GoI ಅನುದಾನ ಬಿಡುಗಡೆ ಆದೇಶ ಸಂಖ್ಯೆ: W-11020/12/2013/ NRDWP/Water/318/ 319/ 320/321/322/323, ದಿ:17.12.2013.
7. GoI ಅನುದಾನ ಬಿಡುಗಡೆ ಆದೇಶ ಸಂಖ್ಯೆ: W-11020/12/2013/ NRDWP/Water/372/ 373/ 374/375/376/377/378, ದಿ:23.01.2014.

---

**<u>ಪೀಠಿಕೆ:</u>**

**2013-14**ರ ಸಾಲಿಗೆ **NRDWP**ಯಡಿ ಕೇಂದ್ರ ವಲಯದ ಗ್ರಾಮೀಣ ನೀರು ಪೂರೈಕೆ ಯೋಜನೆಗಳ ಅನುಷ್ಠಾನ ಸಲುವಾಗಿ ಕೇಂದ್ರ ಸರ್ಕಾರವು ಉಲ್ಲೇಖ (3) ರಿಂದ (6)ರಲ್ಲಿ ಬಿಡುಗಡೆ ಮಾಡಿದ ಅನುದಾನಕ್ಕೆ ಪೂರಕವಾಗಿ ಈಗಾಗಲೇ ರಾಜ್ಯವಲಯದಡಿ ರಾಜ್ಯದ ಪಾಲಿನ **ರೂ.695.80ಕೋಟಿ** ಅನುದಾನವನ್ನು ಉಲ್ಲೇಖಿತ (2)ರಲ್ಲಿ ಬಿಡುಗಡೆ ಮಾಡಲಾಗಿದೆ. ಉಲ್ಲೇಖ (7)ರಲ್ಲಿನ 7 ಪ್ರತ್ಯೇಕ ಆದೇಶಗಳಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಬಿಡುಗಡೆಯಾದ **MDI Funds (ಪ್ರೋತ್ಸಾಹ ಧನ) NRDWP** ಬಾಬ್ತಿನ **Coverage & Water Quality, Sustainability, O&M, DDP,** ಹಾಗೂ **SCP/TSP** ಸೇರಿ ಒಟ್ಟು ಅನುದಾನ **ರೂ.249.412ಕೋಟಿ** ರಾಜ್ಯ ಮಟ್ಟದ **SWSM** ಖಾತೆಗೆ **ದಿನಾಂಕ:29.01.2014**ರಂದು ಜಮೆಯಾಗಿರುವುದು ಖಾತ್ರಿಯಾಗಿದೆ. ಸದರಿ ಕೇಂದ್ರ ವಲಯದ ಅನುದಾನವನ್ನು <u>ರಾಜ್ಯದ ಎಲ್ಲಾ 30 ಜಿಲ್ಲಾ ಪಂಚಾಯತ್</u>ಗಳಿಗೆ ಕುಡಿಯುವ ನೀರಿನ ಯೋಜನೆಗಳನ್ನು ಅನುಷ್ಠಾನಗೊಳಿಸಲು ಬಿಡುಗಡೆ ಮಾಡಬೇಕಾಗಿದೆ. ಆದ್ದರಿಂದ ಈ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/52/ಗ್ರಾನೀಸ(2)/2013 ಬೆಂಗಳೂರು, ದಿನಾಂಕ: 05.02.2014</u>**

ಪೀಠಿಕೆಯಲ್ಲಿನ ವಾಸ್ತವಾಂಶಗಳ ಹಿನ್ನೆಲೆಯಲ್ಲಿ **NRDWP** ಮಾರ್ಗಸೂಚಿಗಳನ್ವಯ ಕೇಂದ್ರ ವಲಯದ **Coverage & Water Quality** ಘಟಕದಡಿ **ರೂ.14570.23ಲಕ್ಷ Sustainability** ಘಟಕದಡಿ **ರೂ.1942.70ಲಕ್ಷ O&M** ಘಟಕದಡಿ **ರೂ.2914.04ಲಕ್ಷ** ಮತ್ತು **DDP** ಘಟಕದಡಿ **ರೂ.5514.31ಲಕ್ಷ** ಸೇರಿ ಒಟ್ಟು **ರೂ.24941.28ಲಕ್ಷ** (ಇಪ್ಪತ್ತ ನಾಲ್ಕು ಸಾವಿರದ ಒಂಬೈನೂರ ನಲವತ್ತೊಂದು ಲಕ್ಷ ಇಪ್ಪತ್ತೆಂಟು ಸಾವಿರ ರೂಪಾಯಿಗಳು ಮಾತ್ರ)ಗಳನ್ನು ಈ ಆದೇಶಕ್ಕೆ ಲಗತ್ತಿಸಿರುವ <u>ಅನುಬಂಧ-1ರಲ್ಲಿರುವಂತೆ ರಾಜ್ಯದ ಎಲ್ಲಾ 30 ಜಿಲ್ಲಾ ಪಂಚಾಯತಿಗಳಿಗೆ</u> ಬಿಡುಗಡೆ ಮಾಡಲು ಸರ್ಕಾರವು ಹರ್ಷಿಸುತ್ತದೆ.

...2

2. ಈ ಆದೇಶದಲ್ಲಿ ಬಿಡುಗಡೆಯಾದ **MDI** ಅನುದಾನವನ್ನು **NRDWP** ಮಾರ್ಗಸೂಚಿಗಳನ್ವಯ ರಾಸಾಯಿನಿಕವಾಗಿ ಕಲುಷಿತವಾಗಿರುವ, ಅಧಿಕ ಲವಣಾಂಶ ಹೊಂದಿರುವ ಜನವಸತಿಗಳಿಗೆ ಮೊದಲ ಆದ್ಯತೆಯಲ್ಲಿ ನಳ ನೀರು ಸರಬರಾಜು ಯೋಜನೆಗೆ ಉಪಯೋಗಿಸಬೇಕು. ನಂತರದ ಆದ್ಯತೆ ಸಲಿನಿಟಿ, ಕಬ್ಬಿಣ, ನೈಟ್ರೈಟ್ ಹೊಂದಿರುವ ಮುಂತಾದ ಸಮಸ್ಯಾತ್ಮಕ ಜನವಸತಿಗಳಿಗೆ ಉಪಯೋಗಿಸಿಕೊಳ್ಳಬೇಕು ಹಾಗೂ ಉಳಿದ ಅನುದಾನವನ್ನು **0–25% ಮತ್ತು 25–50%** ಹಾಗೂ **50–75%** ಆವರಿಸಿರುವ ಜನವಸತಿಗಳಿಗೆ ಉಪಯೋಗಿಸಬೇಕು.

3. ಈ ಆದೇಶದಲ್ಲಿ ಬಿಡುಗಡೆಯಾದ ಅನುದಾನವನ್ನು **RTGS** ಮುಖೇನ ಈಗಾಗಲೇ ಗೊತ್ತುಪಡಿಸಿರುವ **SWSM ಬ್ಯಾಂಕ್ ಖಾತೆ ಸಂಖ್ಯೆ:04462010091577** ಮುಖೇನ ಆಯಾ ಘಟಕವಾರು (**SCP/TSP** ಬಾಬ್ತಿನ ವೆಚ್ಚ ಸೇರಿದಂತೆ) ಪ್ರತ್ಯೇಕವಾಗಿ ವಿನಿಯೋಗಿಸತಕ್ಕದ್ದು. ಸದರಿ ಅನುದಾನ ಬಿಡುಗಡೆ ಹಾಗೂ ವಿನಿಯೋಗದ ಆರ್ಥಿಕ ಮತ್ತು ಭೌತಿಕ ಪ್ರಗತಿಯನ್ನು **2013–14**ರ ಸಾಲಿನ **IMIS**ನಲ್ಲಿ ದಾಖಲಿಸಲು **CE/PRED** ಹಾಗೂ ಸಂಬಂಧಿಸಿದ ಜಿಲ್ಲಾ ಪಂಚಾಯಿತಿಗಳು ಕ್ರಮವಹಿಸತಕ್ಕದ್ದು. ಈ ಆದೇಶದಲ್ಲಿ ಬಿಡುಗಡೆಯಾದ ಅನುದಾನವನ್ನು ಅನುಮೋದಿತ ಕಿಯ್ರಾಯೋಜನೆಗಳನ್ವಯವೇ ಆಯಾ ಘಟಕವಾರು ವಿನಿಯೋಗಿಸತಕ್ಕದ್ದು.

4. ಈ ಆದೇಶದಲ್ಲಿ ಬಿಡುಗಡೆಯಾಗಿರುವ ಕೇಂದ್ರ ವಲಯದ ಅನುದಾನವನ್ನು ರಾಜ್ಯ ಮಟ್ಟದಲ್ಲಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ **SWSM**ನ ಮೂಲ **ಖಾತೆ ಸಂಖ್ಯೆ:04462010091577**ರಿಂದ, ಸಂಬಂಧಪಟ್ಟ **ಜಿಲ್ಲಾ ಪಂಚಾಯತಿಗಳು / PRED**ಗಳು ಆಯಾ ಜಿಲ್ಲಾವಾರು ಬಿಡುಗಡೆ ಮಾಡಿರುವ ಅನುದಾನದಮಿತಿಯೊಳಗೆ ಸಲ್ಲಿಸುವ ಬಿಲ್‌ಗಳನ್ನು ಮಾನ್ಯ ಮಾಡಲು ಸಿಂಡಿಕೇಟ್ ಬ್ಯಾಂಕ್ ರಾಜ್ಯ ಮಟ್ಟದಲ್ಲಿ ಕ್ರಮವಹಿಸತಕ್ಕದ್ದು. **O&M** ಬಾಬ್ತಿನ ಅನುದಾನವನ್ನು ಈ ಆದೇಶಕ್ಕೆ ಲಗತ್ತಿಸಿರುವ **ಗ್ರಾಮ ಪಂಚಾಯತಿವಹಿ ಬ್ಯಾಂಕ್ ಖಾತೆಗಳಿಗೆ RTGS ಮುಖೇನ ನಮೂದಿಸಿರುವ ಮೊತ್ತದ ಅನುದಾನವನ್ನು ಮಾತ್ರ ಒಂದೇ ಬಾರಿಗೆ ವರ್ಗಾಯಿಸಲು ಸಿಂಡಿಕೇಟ್ ಬ್ಯಾಂಕ್ / ತಕ್ಷಣ ಕ್ರಮವಹಿಸಬೇಕು.** ಇದರ ಸಾಫ್ಟ್‌ಕಾಪಿ ಸಹ ಅಡಕ ಮಾಡಿದೆ. ಗ್ರಾಮ ಪಂಚಾಯತಿಗಳು ಈ ಅನುದಾನವನ್ನು **ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ/05/ಗ್ರಾನೀಸ(2)/2013, ದಿನಾಂಕ:03/04:07:2013**ರ ಪರಿಮಿತಿಯಲ್ಲಿ ವಿನಿಯೋಗಿಸಿ, ಇಲಾಖಾ ಪಂಚತಂತ್ರದ ತಂತ್ರಾಂಶದಲ್ಲಿ ಹಾಗೂ **IMIS**ನಲ್ಲಿ ವೆಚ್ಚ ದಾಖಲಿಸಬೇಕು. ಇದನ್ನು ಜಿಲ್ಲಾ ಪಂಚಾಯತಿಗಳು / ತಾಲ್ಲೂಕು ಪಂಚಾಯತಿಗಳು ಪರಿವೀಕ್ಷಿಸಿ ದೃಢೀಕರಿಸಬೇಕು.

5. ಮೇಲ್ಕಂಡ ಅನುದಾನವನ್ನು ಅನುಮೋದನೆಯಾಗಿ ಕ್ರಿಯಾ ಯೋಜನೆಯಡಿ ಸೇರ್ಪಡಿಸಲ್ಪಟ್ಟಿರುವ / ಮುಂದುವರಿದಿರುವ / ಪೂರ್ಣಗೊಳಿಸಬೇಕಾಗಿರುವ ಕುಡಿಯುವ ನೀರಿನ ಯೋಜನೆಗಳ ಸಲುವಾಗಿ ಮಾತ್ರ ವಿನಿಯೋಗಿಸತಕ್ಕದ್ದು.

6. **CE,PRED** ಮತ್ತು ಜಿಲ್ಲಾ ಪಂಚಾಯತಿಗಳು **MDI** ಅನುದಾನದ / ಕಾಮಗಾರಿ ಅನುಷ್ಠಾನದ ಆರ್ಥಿಕ ಮತ್ತು ಭೌತಿಕ ಪ್ರಗತಿಯನ್ನು **IMIS** ವ್ಯವಸ್ಥೆಯಡಿ ಪ್ರತಿ ಮಾಹೆ ಪ್ರತ್ಯೇಕವಾಗಿ ದಾಖಲಿಸತಕ್ಕದ್ದು.

7. ಈ ಆದೇಶವನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಆಂತರಿಕ ಆರ್ಥಿಕ ಸಲಹೆಗಾರರು, ಯೋಜನೆಗಳ ಮುಂದುವರಿಕೆಗೆ ಹೊರಡಿಸಿರುವ **ಆದೇಶ ಸಂಖ್ಯೆ: ಗ್ರಾಅಪ/58/ಎಎಫ್ಎನ್/2012, ದಿನಾಂಕ:01.04.2013ರನ್ವಯ** ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ರಾಮಕೃಷ್ಣ)
ಸರ್ಕಾರದ ಉಪ ಕಾರ್ಯದರ್ಶಿ(ಗ್ರಾನೀಸ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
ಇಮೇಲ್:rk3452000@gmail.com
ಫೋನ್:22032806, ಫ್ಯಾಕ್ಸ್:22203175

**ಪ್ರತಿಗಳು:**

1. ಮಹಾಲೇಖಪಾಲರು (ಲೆಕ್ಕಪತ್ರ) ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲರು (ಎಯು–1) ಕರ್ನಾಟಕ, ಬೆಂಗಳೂರು.

3. ಮಹಾಲೇಖಪಾಲರು (ಎಯು-2) ಕರ್ನಾಟಕ, ಬೆಂಗಳೂರು.
4. ಉಪ ಮಹಾಲೇಖಪಾಲರು, ಮಹಾಲೇಖಪಾಲರು (ಎಯು-1) ರವರ ಶಾಖಾ ಕಛೇರಿ, ಕಾಲೇಜು ರಸ್ತೆ, ಧಾರವಾಡ.
5. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
7. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
8. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನಾ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು.
9. ವಿಶೇಷಾಧಿಕಾರಿ (ಜಿಪಂ) ಹಾಗೂ ಸರ್ಕಾರದ ಪದನಿಮಿತ್ತ ಉಪಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಬೆಂಗಳೂರು-1.
10. ಸರ್ಕಾರದ ಅಧೀನ ಕಾರ್ಯದರ್ಶಿ, ವೆಚ್ಚ (6) (ಜಿಪಂ) ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
11. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, 2ನೇ ಮಹಡಿ, ಗ್ರಾಮೀಣಾಭಿವೃದ್ಧಿ ಭವನ, ಆನಂದರಾವ್ ವೃತ್ತ, ಬೆಂಗಳೂರು-09.
12. ರಾಜ್ಯದ ಎಲ್ಲಾ (30) ಜಿಲ್ಲಾ ಪಂಚಾಯತ್‌ಗಳ ಅಧ್ಯಕ್ಷರುಗಳು.
13. ರಾಜ್ಯದ ಎಲ್ಲಾ ಜಿಲ್ಲಾ (30) ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು / ಮುಖ್ಯ ಲೆಕ್ಕಾಧಿಕಾರಿಗಳು.
14. ರಾಜ್ಯದ ಎಲ್ಲಾ (8) ಪಂಚಾಯತ್ ರಾಜ್ ಇಂಜಿನಿಯರಿಂಗ್ ವೃತ್ತಗಳ ಅಧೀಕ್ಷಕ ಅಭಿಯಂತರುಗಳು.
15. ಎಲ್ಲಾ (38) ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಗಳ ಕಾರ್ಯಪಾಲಕ ಇಂಜಿನಿಯರ್‌ಗಳು.
16. ಮುಖ್ಯ ಲೆಕ್ಕಾಧಿಕಾರಿಗಳು, ಮುಖ್ಯ ಇಂಜಿನಿಯರ್ PRED ಕಛೇರಿ, ಬೆಂಗಳೂರು.
17. ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ (ಪಂ.ರಾಜ್) ಇವರ ಆಪ್ತ ಕಾರ್ಯದರ್ಶಿಗಳು.
18. ನಿರ್ದೇಶಕರು, KRWSSA ಮತ್ತು ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ / ಆಂತರಿಕ ಆರ್ಥಿಕ ಸಲಹೆಗಾರರು / ಅಪರ ನಿರ್ದೇಶಕರು, ಆರ್ಥಿಕ – KRWSSA, RDPR ಇಲಾಖೆ ಇವರುಗಳ ಆಪ್ತ ಸಹಾಯಕರು.
19. ನಿರ್ದೇಶಕರು, ಶ್ರೀ ಅಬ್ದುಲ್ ನಜೀರ್‌ಸಾಬ್‌ರವರ ಗ್ರಾಮೀಣಾಭಿವೃದ್ಧಿ ರಾಜ್ಯ ಸಂಸ್ಥೆ, ಲಲಿತ್ ಮಹಲ್ ರಸ್ತೆ, ಮೈಸೂರು.
20. ಸಿಂಡಿಕೇಟ್ ಬ್ಯಾಂಕ್, BWSSB ಬ್ರ್ಯಾಂಚ್, ರಾಜಧೂತ್ ಕಾಂಪ್ಲೆಕ್ಸ್, ಅವೆನ್ಯೂ ರಸ್ತೆ, ಬೆಂಗಳೂರು.
21. ಮುಖ್ಯ ಸಂಪಾದಕರು ಮತ್ತು ಸಂಪರ್ಕಾಧಿಕಾರಿ "ಕರ್ನಾಟಕ ವಿಕಾಸ" ಗ್ರಾಅಪಂ.ರಾಜ್ ಇಲಾಖೆ, ಬೆಂಗಳೂರು.
22. ಶಾಖಾಧಿಕಾರಿ, ರವಾನೆ ಮತ್ತು ಸ್ವೀಕೃತಿ ಶಾಖೆ, ಗ್ರಾಅಪಂ.ರಾಜ್ ಇಲಾಖೆ (ವಾರದ ಗೆಜೆಟ್‌ನಲ್ಲಿ ಪ್ರಕಟಿಸಲು 5 ಪ್ರತಿಗಳು).
23. ರಾಜ್ಯ ಪತ್ರಾಗಾರ ಇಲಾಖೆ (ಬಿಡಿ ಪ್ರತಿ ಶಾಖೆ).
24. ಗ್ರಾಅಪಂ.ರಾಜ್ ಇಲಾಖೆಯ ಮಾಹಿತಿ ಕೇಂದ್ರ (10 ಪ್ರತಿಗಳು).
25. ಶಾಖಾ ರಕ್ಷಾ ಕಡತಃ ಹೆಚ್ಚುವರಿ ಪ್ರತಿಗಳು.

ಅನುಬಂಧ-1

ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 52 ಗ್ರಾನೀಸ(2) 2013, ದಿನಾಂಕ: 05.02.2014ರ ಲಗತ್ತು

2013-14ರ ಸಾಲಿನಲ್ಲಿ ಜಿಲ್ಲಾ ಪಂಚಾಯತಿಗಳಿಗೆ ಕೇಂದ್ರ ವಲಯದ NRDWPಯಡಿ ಬಿಡುಗಡೆ ಮಾಡಲಾದ ಅನುದಾನ

| ಕ್ರ. ಸಂ | ಜಿಲ್ಲೆ | ಘಟಕ | | | | | | | | | | | ಒಟ್ಟು ಬಿಡುಗಡೆ ಮಾಡಲಾದ ಅನುದಾನ (ರೂ.ಲಕ್ಷಗಳಲ್ಲಿ) (6+7+8+13) |
|---|---|---|---|---|---|---|---|---|---|---|---|---|---|
| | | ಕೇಂದ್ರ NRDWP ವಲಯ | | | | | | | | | | | |
| | | Coverage & Quality | | | | Sustainability | O&M | Blocks | DDP | | | | |
| | | SCP | TSP | GEN | TOTAL | TOTAL | TOTAL | | SCP | TSP | GEN | TOTAL | |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 |
| 1 | ಬಾಗಲಕೋಟೆ | 170.36 | 56.14 | 272.99 | 499.50 | 66.60 | 99.90 | 6 | 385.00 | 126.78 | 992.42 | 1504.20 | 2170.20 |
| 2 | ಬೆಂಗಳೂರು(ಗ್ರಾ) | 59.64 | 19.65 | 95.56 | 174.85 | 23.31 | 34.97 | 0 | 0.00 | 0.00 | 0.00 | 0.00 | 233.14 |
| 3 | ಬೆಂಗಳೂರು(ನ) | 37.21 | 12.26 | 59.63 | 109.10 | 14.55 | 21.82 | 0 | 0.00 | 0.00 | 0.00 | 0.00 | 145.47 |
| 4 | ಬೆಳಗಾಂ | 348.27 | 114.78 | 558.08 | 1021.13 | 136.15 | 204.23 | 0 | 0.00 | 0.00 | 0.00 | 0.00 | 1361.51 |
| 5 | ಬಳ್ಳಾರಿ | 215.29 | 70.95 | 344.99 | 631.23 | 84.16 | 126.25 | 4 | 256.00 | 84.52 | 661.61 | 1002.13 | 1843.77 |
| 6 | ಬೀದರ್ | 141.32 | 46.57 | 226.45 | 414.35 | 55.25 | 82.87 | 0 | 0.00 | 0.00 | 0.00 | 0.00 | 552.46 |
| 7 | ಬಿಜಾಪುರ | 273.76 | 90.22 | 438.68 | 802.65 | 107.02 | 160.53 | 5 | 321.00 | 105.65 | 827.00 | 1253.65 | 2323.85 |
| 8 | ಚಾಮರಾಜನಗರ | 149.32 | 49.21 | 239.27 | 437.80 | 58.37 | 87.56 | 0 | 0.00 | 0.00 | 0.00 | 0.00 | 583.74 |
| 9 | ಚಿಕ್ಕಬಳ್ಳಾಪುರ | 111.99 | 36.91 | 179.45 | 328.34 | 43.78 | 65.67 | 0 | 0.00 | 0.00 | 0.00 | 0.00 | 437.79 |
| 10 | ಚಿಕ್ಕಮಗಳೂರು | 189.69 | 62.51 | 303.96 | 556.15 | 74.15 | 111.23 | 0 | 0.00 | 0.00 | 0.00 | 0.00 | 741.54 |
| 11 | ಚಿತ್ರದುರ್ಗ | 221.90 | 73.13 | 355.59 | 650.62 | 86.75 | 130.12 | 0 | 0.00 | 0.00 | 0.00 | 0.00 | 867.49 |
| 12 | ದಕ್ಷಿಣಕನ್ನಡ | 115.28 | 37.99 | 184.73 | 338.00 | 45.07 | 67.60 | 0 | 0.00 | 0.00 | 0.00 | 0.00 | 450.66 |
| 13 | ದಾವಣಗೆರೆ | 154.61 | 50.95 | 247.76 | 453.33 | 60.44 | 90.66 | 1 | 64.12 | 21.13 | 165.42 | 250.67 | 855.10 |
| 14 | ಧಾರವಾಡ | 105.89 | 34.90 | 169.69 | 310.48 | 41.40 | 62.10 | 0 | 0.00 | 0.00 | 0.00 | 0.00 | 413.97 |
| 15 | ಗದಗ | 117.33 | 38.67 | 188.02 | 344.02 | 45.87 | 68.80 | 0 | 0.00 | 0.00 | 0.00 | 0.00 | 458.69 |
| 16 | ಗುಲ್ಬರ್ಗಾ | 285.84 | 94.20 | 458.04 | 838.09 | 111.75 | 167.62 | 0 | 0.00 | 0.00 | 0.00 | 0.00 | 1117.45 |
| 17 | ಹಾಸನ | 180.09 | 59.35 | 288.58 | 528.02 | 70.40 | 105.60 | 0 | 0.00 | 0.00 | 0.00 | 0.00 | 704.03 |
| 18 | ಹಾವೇರಿ | 125.17 | 41.25 | 200.58 | 367.00 | 48.93 | 73.40 | 0 | 0.00 | 0.00 | 0.00 | 0.00 | 489.34 |
| 19 | ಕೊಡಗು | 109.01 | 35.92 | 174.68 | 319.62 | 42.62 | 63.92 | 0 | 0.00 | 0.00 | 0.00 | 0.00 | 426.16 |
| 20 | ಕೋಲಾರ | 103.20 | 34.01 | 165.37 | 302.57 | 40.34 | 60.51 | 0 | 0.00 | 0.00 | 0.00 | 0.00 | 403.43 |
| 21 | ಕೊಪ್ಪಳ | 148.00 | 48.77 | 237.16 | 433.94 | 57.86 | 86.79 | 3 | 192.22 | 63.39 | 496.22 | 751.83 | 1330.42 |
| 22 | ಮಂಡ್ಯ | 131.21 | 43.24 | 210.25 | 384.70 | 51.29 | 76.94 | 0 | 0.00 | 0.00 | 0.00 | 0.00 | 512.94 |
| 23 | ಮೈಸೂರು | 163.17 | 53.77 | 261.47 | 478.42 | 63.79 | 95.68 | 0 | 0.00 | 0.00 | 0.00 | 0.00 | 637.89 |
| 24 | ರಾಯಚೂರು | 222.80 | 73.43 | 357.03 | 653.26 | 87.10 | 130.65 | 3 | 192.22 | 63.39 | 496.22 | 751.83 | 1622.84 |
| 25 | ರಾಮನಗರ | 92.91 | 30.62 | 148.89 | 272.42 | 36.32 | 54.48 | 0 | 0.00 | 0.00 | 0.00 | 0.00 | 363.22 |
| 26 | ಶಿವಮೊಗ್ಗ | 220.41 | 72.64 | 353.19 | 646.24 | 86.16 | 129.25 | 0 | 0.00 | 0.00 | 0.00 | 0.00 | 861.65 |
| 27 | ತುಮಕೂರು | 280.03 | 92.28 | 448.72 | 821.03 | 109.47 | 164.21 | 0 | 0.00 | 0.00 | 0.00 | 0.00 | 1094.71 |
| 28 | ಉಡುಪಿ | 89.30 | 29.43 | 143.09 | 261.81 | 34.91 | 52.36 | 0 | 0.00 | 0.00 | 0.00 | 0.00 | 349.08 |
| 29 | ಉತ್ತರ ಕನ್ನಡ | 268.13 | 88.36 | 429.66 | 786.16 | 104.82 | 157.23 | 0 | 0.00 | 0.00 | 0.00 | 0.00 | 1048.21 |
| 30 | ಯಾದಗಿರಿ | 138.27 | 45.57 | 221.56 | 405.40 | 54.05 | 81.08 | 0 | 0.00 | 0.00 | 0.00 | 0.00 | 540.53 |
| | ಒಟ್ಟು | 4969.42 | 1637.69 | 7963.12 | 14570.23 | 1942.70 | 2914.04 | 22 | 1410.56 | 464.86 | 3638.89 | 5514.31 | 24941.28 |

(ರಾಮಕೃಷ್ಣ)
ಸರ್ಕಾರದ ಉಪ ಕಾರ್ಯದರ್ಶಿ (ಗ್ರಾನೀಸ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

5/2/14